# Vydehi Institute Elevates Emergency Medicine in Karnataka

## ತುರ್ತು ಔಷಧಿಯತ್ತ ವೈದ್ಯಕೀಯ ವಿದ್ಯಾರ್ಥಿಗಳು ಗಮನ ಹರಿಸಲಿ

ಬೆಂಗಳೂರು, ಸೆ.23– ತುರ್ತು ಔಷಧ ವಿಭಾಗದ ಮಹತ್ವ ಏನೆಂಬುದು ಕೋವಿಡ್ ಸಂದರ್ಭದಲ್ಲಿ ಅರ್ಥವಾಗಿದ್ದು, ವೈದ್ಯಕೀಯ ವಿದ್ಯಾರ್ಥಿಗಳು ಹೆಚ್ಚಿನ ಆಸಕ್ತಿವಹಿಸಿ ತರಬೇತಿ ತಪಡೆದುಕೊಳ್ಳಬೇಕು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ.

ನಗರದಲ್ಲಿಂದು ವೈದೇಹಿ ವೈದ್ಯಕೀಯ ಮತ್ತು ಸಂಶೋಧನಾ ಕೇಂದ್ರದಲ್ಲಿ ನಡೆದ 3ನೇ ವಾರ್ಷಿಕ ರಾಜ್ಯಮಟ್ಟದ ತುರ್ತು ಔಷಧ ಸಮ್ಮೇಳನವನ್ನು ಉದ್ಘಾಟಿಸಿದ ಬಳಿಕ ಮಾತನಾಡಿದ ಅವರು, ತುರ್ತು ಔಷಧ ವಿಭಾಗ ವೈದ್ಯಕೀಯ ಕ್ಷೇತ್ರದಲ್ಲಿಯೇ ಅತ್ಯಂತ ಮುಖ್ಯವಾದದು.

ಸಾವು ಮತ್ತು ಬದುಕಿನ ಮಧ್ಯೆ ಹೋರಾಟ ನಡೆಸುತ್ತಿರುವ ರೋಗಿಗೆ ಮರುಜೀವ ನೀಡಬಹುದಾಗಿದೆ. ಈ ಪರಿಸ್ಥಿತಿ ಕೋವಿಡ್ ಸಂದರ್ಭದಲ್ಲಿ ಅನುಭವಕ್ಕೆ ಬಂದಿದೆ. ಈಗಗಾಲೇ ರಾಜ್ಯದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ತುರ್ತು ಔಷಧ ವಿಭಾಗವಿದೆ. ಅದರ ಗುಣಮಟ್ಟ ಮತ್ತು ವೈದ್ಯರಿಗೆ ಹೆಚ್ಚಿನ ತರಬೇತಿಯ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದರು.




ವೈದೇಹಿ ಸಂಸ್ಥೆಯಲ್ಲಿ ಸಿದ್ಧವಾಗಿರುವ ವೈದೇಹಿ ಅಡ್ವಾನ್ಸ್ಡ್ ಸಿಮ್ಯೂಲೇಷನ್ ಅಕಾಡೆಮಿ ಏಷ್ಯಾದಲ್ಲಿಯೇ ಪ್ರಥಮ ಸುಸಜ್ಜಿತವಾದ ಕೇಂದ್ರವಾಗಿದೆ. ಹೆಚ್ಚು ವೃತ್ತಿಪರತೆಯಿಂದ ಕೂಡಿದೆ. ಈ ಬಗ್ಗೆ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚಿಸಿ, ಇಲಾಖೆಯಲ್ಲಿ ಸುಧಾರಣೆ ತರಲಾಗುವುದು ಎಂದು ಹೇಳಿದರು.

ತುರ್ತು ಔಷಧದಲ್ಲಿ ತರಬೇತಿಯ ಜೊತೆಗೆ ಚರ್ಚೆ, ಸಂವಾದ, ಸಂಶೋಧನೆ ಮೂಲಕ ಹೆಚ್ಚು-ಹೆಚ್ಚು ತಿಳಿದುಕೊಳ್ಳಬೇಕು. ವೈದೇಹಿ ಆಸ್ಪತ್ರೆಯಲ್ಲಿರುವ ತುರ್ತು ಔಷಧ ವಿಭಾಗದ ಪ್ರಯೋಗಲಯ ಏಷ್ಯಾದಲ್ಲೇ ಮೊದಲು ಎಂದು ಭಾವಿಸಿದ್ದೇನೆ. ವೈದ್ಯಕೀಯ ಕ್ಷೇತ್ರದಲ್ಲಿ ಮತ್ತಷ್ಟು ಗಣನೀಯ ಸಾಧನೆಗಳು ಆಗಬೇಕಿದೆ ಎಂದು ಹೇಳಿದರು.

ವೈದೇಹಿ ಸಮೂಹ ಸಂಸ್ಥೆಗಳ ಅಧ್ಯಕ್ಷೆ ಕಲ್ಪಜಾ ಡಿ.ಎ. ಮಾತನಾಡಿ, ತುರ್ತು ಔಷಧ ವಿಭಾಗದ ಕುರಿತು ನಾಗರಿಕರಲ್ಲಿ ಜಾಗೃತಿ ಮೂಡಿಸುವ ಕೆಲಸ ಆಗಬೇಕು. ಕೋವಿಡ್ ಸಂದರ್ಭದಲ್ಲಿ ಎಮೆರ್ಜೆನ್ಸಿ ಮೆಡಿಸಿನ್ ಬಗ್ಗೆ ಸಾಕಷ್ಟು ಅರ್ಥವಾಗಿದೆ. ಎಮೆರ್ಜೆನ್ಸಿ ಮೆಡಿಸಿನ್ ನ ಪ್ರಾಮುಖ್ಯತೆಯನ್ನು ಹರಿತು ಎಲ್ಲಾ ಆಸ್ಪತ್ರೆಗಳನ್ನು ಅದನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ವಿಮ್ಸ್ ಮತ್ತು ಆರ್‌ಸಿ ಸಲಹೆಗಾರ ಡಾ. ಮಹೇಶ್ ಕೊತ್ತಪಲ್ಲಿ ಮಾತನಾಡಿ, ಇತ್ತೀಚೆಗೆ ತುರ್ತು ಔಷಧ ವಿಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು ಚಿಕಿತ್ಸೆಗೆ ಒಳಪಡುತ್ತಿದ್ದಾರೆ. ಪ್ರತಿ ನಗರದಲ್ಲಿ 3 ಲೆವೆಲ್ ಟ್ರಾಮಾ ಕೇಂದ್ರಗಳಿರಬೇಕು. ಎಮೆರ್ಜೆನ್ಸಿ ರೋಗಿಯನ್ನು ಸಾಮಾನ್ಯ ನರ್ಸಿಂಗ್ ಹೋಮ್ನಲ್ಲಿ ಚಿಕಿತ್ಸೆ ಒಳಪಡಿಸಿದಾಗ, ಸೂಕ್ತ ಚಿಕಿತ್ಸೆ ದೊರೆಯದೆ ಆತನ ಸ್ಥಿತಿ ಮತ್ತಷ್ಟು ಹಾಳಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ತುರ್ತು ಔಷಧ ವಿಭಾಗದ ಕಲಿಕೆ ಹೆಚ್ಚಿನ ಸಂಖ್ಯೆಯಲ್ಲಿ ಆಗಬೇಕಿದೆ ಎಂದು ಹೇಳಿದರು.

ಇಎಮ್–ಕರ್ನಾಟಕ ರಾಜ್ಯಾದ್ಯಂತದ ತುರ್ತು ಚಿಕಿತ್ಸಕರನ್ನು ಒಳಗೊಂಡಿರುವ ಒಂದು ಅಂಗವಾಗಿದೆ. ತುರ್ತು ಔಷಧ ಒಂದು ವಿಶೇಷತೆಯಾಗಿ ಪ್ರವರ್ಧಮಾನಕ್ಕೆ ಬರುತ್ತಿದೆ. ಜೊತೆಗೆ ಪ್ರತಿ ವರ್ಷ ಇಎಂ–ಕರ್ನಾಟಕ ರಾಜ್ಯದಾದ್ಯಂತ ವಿಸ್ತರಿಸುತ್ತಿರುವುದು ಸಂತಸದ ವಿಷಯ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಆರ್.ಜಿ.ಯು.ಹೆಚ್.ಎಸ್ ನ ಮಾಜಿ ಮೊದಲ ಉಪಕುಲಪತಿ ಡಾ.ಕಾಂತ ಎಸ್, ವೈದ್ಯಕೀಯ ತಜ್ಞರು, ವೈದ್ಯಕೀಯ ಸಿಬ್ಬಂದಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

Bengaluru, Karnataka – Vydehi Institute of Medical Sciences and Research Center (VIMS&RC) is at the forefront of improving emergency medicine in Karnataka. Health Minister Dinesh Gundu Rao, speaking at the 3rd Annual State Level Emergency Medicine Conference 2023 hosted by VIMS&RC, highlighted the life-saving potential of well-equipped emergency departments.

Dr. Mahesh Kottapalli, Advisor at Vydehi, called for three-level trauma centers in all cities to enhance care for critical patients. Over 250 emergency physicians and residents attended the workshop, covering key aspects of emergency medicine.

Minister Rao pledged to enhance the quality of emergency medicine departments in government medical colleges. Vydehi's Advanced Simulation Academy, the first of its kind in Asia, stands as a valuable resource.

ಪ್ರಜಾವಾಣಿ

### ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿಕೆ

# ‘ತುರ್ತು ಚಿಕಿತ್ಸೆ ತರಬೇತಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ತುರ್ತು ಚಿಕಿತ್ಸೆಯ ಗುಣಮಟ್ಟ ವೃದ್ಧಿಗೆ ವೈದ್ಯರಿಗೆ ಹೆಚ್ಚಿನ ತರಬೇತಿ ಒದಗಿಸಲಾಗುವುದು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ವೈದೇಹಿ ವೈದ್ಯಕೀಯ ಮತ್ತು ಸಂಶೋಧನಾ ಕೇಂದ್ರ ನಗರದಲ್ಲಿ ಶನಿವಾರ ಹಮ್ಮಿಕೊಂಡ 3ನೇ ವಾರ್ಷಿಕ ರಾಜ್ಯಮಟ್ಟದ ತುರ್ತು ಔಷಧ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

‘ಕೋವಿಡ್ ಕಾಣಿಸಿಕೊಂಡ ಸಂದರ್ಭದಲ್ಲಿ ತುರ್ತು ಚಿಕಿತ್ಸಾ ವಿಭಾಗದ ಮಹತ್ವ ಅರಿವಿಗೆ ಬಂದಿತು. ವೈದ್ಯಕೀಯ ಕ್ಷೇತ್ರದಲ್ಲಿ ತುರ್ತು ಔಷಧ ವಿಭಾಗ ಅತ್ಯಂತ ಪ್ರಮುಖ ವಿಭಾಗವಾಗಿದೆ. ಸಾವು ಮತ್ತು ಬದುಕಿನ ನಡುವೆ ಹೋರಾಟ ನಡೆಸುತ್ತಿರುವ ರೋಗಿಗೆ ಸಮಯಕ್ಕೆ ಸರಿಯಾಗಿ ಚಿಕಿತ್ಸೆ ಒದಗಿಸಿದಲ್ಲಿ ಆತನನ್ನು ಉಳಿಸಿಕೊಳ್ಳಲು ಸಾಧ್ಯ. ಆದ್ದರಿಂದ ವೈದ್ಯಕೀಯ ಕಾಲೇಜುಗಳಲ್ಲಿನ ತುರ್ತು ಔಷಧ ವಿಭಾಗವನ್ನು ಬಲಪಡಿಸಿ, ತುರ್ತು ಚಿಕಿತ್ಸೆಗೆ ಆದ್ಯತೆ ನೀಡಲಾಗುತ್ತಿದೆ. ವೈದ್ಯರಿಗೆ ಸಹ ಈ ವಿಭಾಗದಲ್ಲಿ ಹೆಚ್ಚಿನ ತರಬೇತಿ ಒದಗಿಸಲಾಗುವುದು’ ಎಂದು ಹೇಳಿದರು.



ಸಮ್ಮೇಳನದಲ್ಲಿ ತುರ್ತು ಚಿಕಿತ್ಸೆಯ ಬಗ್ಗೆ ಮಾಹಿತಿ ಪಡೆದ ದಿನೇಶ್ ಗುಂಡೂರಾವ್

‘ವೈದ್ಯಕೀಯ ಚಿಕಿತ್ಸೆಗಳನ್ನು ಸುಲಭವಾಗಿಸಲು ಅತ್ಯಾಧುನಿಕ ತಂತ್ರಜ್ಞಾನಗಳ ನೆರವನ್ನು ಪಡೆದುಕೊಳ್ಳಬೇಕು. ವೈದ್ಯಕೀಯ ಕ್ಷೇತ್ರದಲ್ಲಿನ ಪ್ರಯೋಗಗಳಿಗೆ ಸರ್ಕಾರವೂ ಅಗತ್ಯ ಪ್ರೋತ್ಸಾಹ ನೀಡಲಿದೆ’ ಎಂದು ತಿಳಿಸಿದರು.

ಸಂಸ್ಥೆಯ ಅಧ್ಯಕ್ಷೆ ಕಲ್ಪಜ ಡಿ.ಎ, ‘ತುರ್ತು ಔಷಧ ವಿಭಾಗದ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಆಗಬೇಕು. ಆಸ್ಪತ್ರೆಗಳು ಸಹ ಈ ವಿಭಾಗದ ಮಹತ್ವವನ್ನು ಅರಿತುಕೊಳ್ಳಬೇಕು. ಕೋವಿಡ್ ಕಾಯಿಲೆ ಕಾಣಿಸಿಕೊಂಡಾಗ ಹಲವರು ತುರ್ತು ಚಿಕಿತ್ಸೆ ಸಮಯಕ್ಕೆ ಸರಿಯಾಗಿ ಸಿಗದೆ ಸಮಸ್ಯೆ ಎದುರಿಸಿದರು. ಆದ್ದರಿಂದ ಸದಾ ಈ ವಿಭಾಗವನ್ನು ಚಿಕಿತ್ಸೆಗೆ ಸನ್ನದ್ಧವಾಗಿಟ್ಟುಕೊಳ್ಳಬೇಕು’ ಎಂದು ಹೇಳಿದರು.

ಸಂಸ್ಥೆಯ ವೈದ್ಯಕೀಯ ಸಲಹೆಗಾರ ಡಾ. ಮಹೇಶ್ ಕೊತ್ತಪಲ್ಲಿ, ‘ರಸ್ತೆ ಅಪಘಾತ ಸೇರಿ ವಿವಿಧ ಸಂದರ್ಭದಲ್ಲಿ ತುರ್ತು ಚಿಕಿತ್ಸೆ ಅಗತ್ಯ. ಇತ್ತೀಚೆಗೆ ತುರ್ತು ಔಷಧ ವಿಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು ಚಿಕಿತ್ಸೆಗೆ ಒಳಪಡುತ್ತಿದ್ದಾರೆ. ಪ್ರತಿ ನಗರದಲ್ಲಿ 3 ಹಂತಗಳ ಟ್ರಾಮಾ ಕೇಂದ್ರಗಳಿರಬೇಕು. ತುರ್ತು ಸಂದರ್ಭದಲ್ಲಿ ರೋಗಿಗೆ ಸಾಮಾನ್ಯ ನರ್ಸಿಂಗ್ ಹೋಮ್‌ನಲ್ಲಿ ಚಿಕಿತ್ಸೆ ಒಳಪಡಿಸಿದಾಗ, ಸೂಕ್ತ ಚಿಕಿತ್ಸೆ ದೊರೆಯದೆ ಆತನ ಸ್ಥಿತಿ ಮತ್ತಷ್ಟು ಬಿಗಡಾಯಿಸುವ ಸಾಧ್ಯತೆ ಇರುತ್ತದೆ. ಆದ್ದರಿಂದ ತುರ್ತು ಔಷಧ ವಿಭಾಗಕ್ಕೆ ಆದ್ಯತೆ ನೀಡಬೇಕು’ ಎಂದು ತಿಳಿಸಿದರು.

ಸಂಯುಕ್ತ ಕರ್ನಾಟಕ

# ತುರ್ತು ಚಿಕಿತ್ಸೆಗೆ ತರಬೇತಿ ಅವಶ್ಯ

**ಬೆಂಗಳೂರು:** ತುರ್ತು ಔಷಧ ವಿಭಾಗದ ಮಹತ್ವ ಏನೆಂಬುದು ಕೊರೊನಾ ಸಂದರ್ಭದಲ್ಲಿ ಅರ್ಥವಾಗಿದ್ದು ವೈದ್ಯಕೀಯ ವಿದ್ಯಾರ್ಥಿಗಳು ಹೆಚ್ಚಿನ ಆಸಕ್ತಿವಹಿಸಿ ತರಬೇತಿ ಪಡೆದುಕೊಳ್ಳಬೇಕೆಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ವೈದೇಹಿ ವೈದ್ಯಕೀಯ ಮತ್ತು ಸಂಶೋಧನಾ ಕೇಂದ್ರದಲ್ಲಿ ಶನಿವಾರ ನಡೆದ 3ನೇ ವಾರ್ಷಿಕ ರಾಜ್ಯಮಟ್ಟದ ತುರ್ತು ಔಷಧ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ತುರ್ತು ಔಷಧ ವಿಭಾಗ ವೈದ್ಯಕೀಯ ಕ್ಷೇತ್ರದಲ್ಲಿಯೇ ಅತ್ಯಂತ ಮುಖ್ಯವಾದದು. ಸಾವು ಮತ್ತು ಬದುಕಿನ ಮಧ್ಯೆ ಹೋರಾಟ ನಡೆಸುತ್ತಿರುವ ರೋಗಿಗೆ ಮರುಜೀವ ನೀಡಬಹುದಾಗಿದೆ.

ಈ ಪರಿಸ್ಥಿತಿ ಕೊರೊನಾ ಸಂದರ್ಭದಲ್ಲಿ ಅನುಭವಕ್ಕೆ ಬಂದಿದೆ. ಈಗಾಗಲೇ ರಾಜ್ಯದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ತುರ್ತು ಔಷಧ ವಿಭಾಗವಿದೆ. ಅದರ ಗುಣಮಟ್ಟ ಮತ್ತು ವೈದ್ಯರಿಗೆ ಹೆಚ್ಚಿನ ತರಬೇತಿಯ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದರು. ವೈದೇಹಿ ಸಂಸ್ಥೆಯಲ್ಲಿ ಸಿದ್ಧವಾಗಿರುವ ವೈದೇಹಿ ಅಡ್ವಾನ್ಸ್ಡ್ ಸಿಮ್ಯೂಲೇಷನ್ ಅಕಾಡೆಮಿ ಏಷ್ಯಾದಲ್ಲಿಯೇ ಪ್ರಥಮ ಸುಸಜ್ಜಿತವಾದ ಕೇಂದ್ರವಾಗಿದೆ. ಹೆಚ್ಚು ವೃತ್ತಿಪರತೆಯಿಂದ ಕೂಡಿದೆ. ಈ ಬಗ್ಗೆ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚಿಸಿ, ಇಲಾಖೆಯಲ್ಲಿ ಸುಧಾರಣೆ ತರಲಾಗುವುದು ಎಂದು ಹೇಳಿದರು.

ತುರ್ತು ಔಷಧದಲ್ಲಿ ತರಬೇತಿಯ ಜೊತೆಗೆ ಚರ್ಚೆ, ಸಂವಾದ, ಸಂಶೋಧನೆ ಮೂಲಕ ಹೆಚ್ಚು-ಹೆಚ್ಚು ತಿಳಿದುಕೊಳ್ಳಬೇಕು. ವೈದೇಹಿ ಆಸ್ಪತ್ರೆಯಲ್ಲಿರುವ ತುರ್ತು ಔಷಧ ವಿಭಾಗದ ಪ್ರಯೋಗಲಯ ಏಷ್ಯಾದಲ್ಲೇ ಮೊದಲು ಎಂದು ಭಾವಿಸಿದ್ದೇನೆ. ವೈದ್ಯಕೀಯ ಕ್ಷೇತ್ರದಲ್ಲಿ ಮತ್ತಷ್ಟು ಗಣನೀಯ ಸಾಧನೆಗಳು ಆಗಬೇಕಿದೆ ಎಂದರು.

ವೈದೇಹಿ ಸಮೂಹ ಸಂಸ್ಥೆಗಳ ಅಧ್ಯಕ್ಷೆ ಕಲ್ಪಜ ಡಿ.ಎ., ವಿಮ್ಸ್ ಮತ್ತು ಆರ್‌ಸಿ ಸಲಹೆಗಾರ ಡಾ. ಮಹೇಶ್ ಕೊತ್ತಪಲ್ಲಿ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಡಾ. ಕಾಂತ ಎಸ್. ಮತ್ತಿತರರಿದ್ದರು.



ವೈದೇಹಿ ವೈದ್ಯಕೀಯ ಮತ್ತು ಸಂಶೋಧನಾ ಕೇಂದ್ರದಲ್ಲಿ ಶನಿವಾರ ನಡೆದ 3ನೇ ವಾರ್ಷಿಕ ರಾಜ್ಯಮಟ್ಟದ ತುರ್ತು ಔಷಧ ಸಮ್ಮೇಳನವನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಉದ್ಘಾಟಿಸಿದರು.

Bangalore Edition
Sep 24, 2023 Page No. 02
Powered by : eReleGo.com

# ತುರ್ತು ಔಷಧ ವಿಭಾಗ ಬಹುಮುಖ್ಯ: ಸಚಿವ

**ಬೆಂಗಳೂರು:** ಕೋವಿಡ್ ಸಂದರ್ಭದಲ್ಲಿ ತುರ್ತು ಔಷಧ ವಿಭಾಗದ ಮಹತ್ವ ಅರಿವು ಮೂಡಿತ್ತು. ವೈದ್ಯಕೀಯ ವಿದ್ಯಾರ್ಥಿಗಳು ಈ ಕ್ಷೇತ್ರದ ಬಗ್ಗೆ ಹೆಚ್ಚಿನ ಆಸಕ್ತಿವಹಿಸಿ ತರಬೇತಿ ಪಡೆದುಕೊಳ್ಳಬೇಕು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ವೈದೇಹಿ ವೈದ್ಯಕೀಯ ಮತ್ತು ಸಂಶೋಧನಾ ಕೇಂದ್ರದಲ್ಲಿ ಶನಿವಾರ ನಡೆದ 3ನೇ ವಾರ್ಷಿಕ ರಾಜ್ಯಮಟ್ಟದ ತುರ್ತು ಔಷಧ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು. ತುರ್ತು ಔಷಧ ವಿಭಾಗ ವೈದ್ಯಕೀಯ ಕ್ಷೇತ್ರದಲ್ಲಿಯೇ ಅತ್ಯಂತ ಮುಖ್ಯವಾದದು. ಇಲ್ಲಿ ಸಾವು ಮತ್ತು ಬದುಕಿನ ಮಧ್ಯೆ ಹೋರಾಟ ನಡೆಸುತ್ತಿರುವ ರೋಗಿಗೆ ಮರುಜೀವ ನೀಡಬಹುದು. ಈ ಪರಿಸ್ಥಿತಿ ಕೋವಿಡ್ ಸಂದರ್ಭದಲ್ಲಿ ಅನುಭವಕ್ಕೆ ಬಂದಿದೆ ಎಂದರು.

ವೈದೇಹಿ ಅಡ್ವಾನ್ಸ್ಡ್ ಸಿಮ್ಯೂಲೇಷನ್ ಅಕಾಡೆಮಿಯು ಏಷ್ಯಾದ ಮೊದಲ ಸುಸಜ್ಜಿತ ತುರ್ತು ಔಷಧ ವಿಭಾಗದ ಪ್ರಯೋಗಾಲಯವಾಗಿದೆ. ಇದು ಹೆಚ್ಚು ವೃತ್ತಿಪರತೆಯಿಂದ ಕೂಡಿದೆ. ತುರ್ತು ಔಷಧದಲ್ಲಿ ತರಬೇತಿಯ ಜತೆಗೆ ಚರ್ಚೆ, ಸಂವಾದ, ಸಂಶೋಧನೆ ಮೂಲಕ ಹೆಚ್ಚು-ಹೆಚ್ಚು ತಿಳಿದುಕೊಳ್ಳಬೇಕು ಎಂದು ಹೇಳಿದರು.

ವೈದೇಹಿ ಸಮೂಹ ಸಂಸ್ಥೆಗಳ ಅಧ್ಯಕ್ಷೆ ಕಲ್ಪಜ ಡಿ.ಎ. ಮಾತನಾಡಿ, ಎಮರ್ಜೆನ್ಸಿ ಮೆಡಿಸಿನ್‌ನ ಪ್ರಾಮುಖ್ಯತೆ ಅರಿತು ಎಲ್ಲಾ ಆಸ್ಪತ್ರೆಗಳನ್ನು ಅದನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ವಿಮ್ಸ್ ಮತ್ತು ಆರ್‌ಸಿ ಸಲಹೆಗಾರರಾದ ಡಾ. ಮಹೇಶ್ ಕೊತ್ತಪಲ್ಲಿ, ಆರ್.ಜಿ.ಯು.ಎಚ್.ಎಸ್. ವಿಶ್ರಾಂತ ಉಪಕುಲಪತಿ ಡಾ. ಕಾಂತ ಇತರರಿದ್ದರು.

The 3rd Annual State Level Emergency Medicine Conference 2023 hosted by Vydehi Institute of Medical Sciences and Research Center (VIMS&RC) received distinguished guests, including Dr. Mrs. S. Kantha, former Adviser of VIMS&RC, and Mrs. D A Kalpaja, Chairperson of VIMS&RC. Their presence at the event added prestige and expertise to the discussions, highlighting the significance of advancing emergency medicine in Karnataka.

# Will upgrade emergency meds dept: Min

EXPRESS NEWS SERVICE
@ Bengaluru

KARNATAKA Health Minister Dinesh Gundu Rao plans to improve the quality of emergency medicine departments. Highlighting the importance of emergency medicine, the minister said that the life of a critical patient can be saved with adequate emergency services.

He was speaking at the inauguration of the 3rd Annual State Level Emergency Medicine Conference held at Vydehi Medical and Research Centre (VIMS) on Saturday.

He added, "Despite the state having emergency medicine departments, we need to upskill the doctors and upgrade the departments. There is a need to create better learning opportunities through discussion and research."

Dr Mahesh Kottapalli, Advisor and Research Consultant at Vydehi Medical and Research Centre, recommended all cities to have three-level trauma centres to improve the quality of care.

# Emergency wings in govt hospitals should be strengthened: Minister

**BENGALURU, DHNS:** The quality of emergency wings in government hospitals should be improved and medical professionals should be trained effectively in emergency medicine, Health minister Dinesh Gundu Rao has said.

He was speaking after inaugurating the state-level emergency medicine conference at Vydehi Institute of Medical Sciences and Research Centre, in Bengaluru on Saturday.

He emphasised on the importance of the golden hour in saving lives during medical emergencies.

Over 250 emergency physicians and residents attended the workshop being held from September 21 to 24. It covered the basics and also emerging areas like airway simulation and resuscitology.

Dr Mahesh Kottapalli, adviser and chief patron at Vydehi Institute, said that every city must have at least a level 3 trauma care centre as more people are getting treated in emergency medicine units. "The chances of survival of a patient starts dimming if he is taken to a nursing home instead of an emergency-care unit in acute situations. The curriculum too should be designed to teach this," he said.

ಸುದ್ದಿಮೂಲ
www.epaper.suddimoola.in

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸಲಹೆ

## ತುರ್ತು ಚಿಕಿತ್ಸೆ ಬಗ್ಗೆ ವೈದ್ಯ ವಿದ್ಯಾರ್ಥಿಗಳು ಆಸಕ್ತಿ ವಹಿಸಬೇಕು



**ಸುದ್ದಿಮೂಲ ವಾರ್ತೆ** ಬೆಂಗಳೂರು, ಸೆ.23: ತುರ್ತು ಔಷಧ ವಿಭಾಗದ ಮಹತ್ವ ಏನೆಂಬುದು ಕೋವಿಡ್ ಸಂದರ್ಭದಲ್ಲಿ ಅರ್ಥವಾಗಿದ್ದು, ವೈದ್ಯಕೀಯ ವಿದ್ಯಾರ್ಥಿಗಳು ಹೆಚ್ಚಿನ ಆಸಕ್ತಿ ವಹಿಸಿ ತರಬೇತಿ ತಪಡೆದುಕೊಳ್ಳಬೇಕು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ವೈದೇಹಿ ವೈದ್ಯಕೀಯ ಮತ್ತು ಸಂಶೋಧನಾ ಕೇಂದ್ರದಲ್ಲಿ ಶನಿವಾರ ನಡೆದ 3ನೇ ವಾರ್ಷಿಕ ರಾಜ್ಯಮಟ್ಟದ ತುರ್ತು ಔಷಧ ಸಮ್ಮೇಳನವನ್ನು ಉದ್ಘಾಟಿಸಿದ ಬಳಿಕ ಮಾತನಾಡಿದ ಅವರು, ತುರ್ತು ಔಷಧ ವಿಭಾಗ ವೈದ್ಯಕೀಯ ಕ್ಷೇತ್ರದಲ್ಲಿಯೇ ಅತ್ಯಂತ ಮುಖ್ಯವಾದದು. ಸಾವು ಮತ್ತು ಬದುಕಿನ ಮಧ್ಯೆ ಹೋರಾಟ ನಡೆಸುತ್ತಿರುವ ರೋಗಿಗೆ ಮರುಜೀವ ನೀಡಬಹುದಾಗಿದೆ. ಈ ಪರಿಸ್ಥಿತಿ ಕೋವಿಡ್ ಸಂದರ್ಭದಲ್ಲಿ ಅನುಭವಕ್ಕೆ ಬಂದಿದೆ. ಈಗಗಾಲೇ ರಾಜ್ಯದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ತುರ್ತು ಔಷಧ ವಿಭಾಗವಿದೆ. ಅದರ ಗುಣಮಟ್ಟ ಮತ್ತು ವೈದ್ಯರಿಗೆ ಹೆಚ್ಚಿನ ತರಬೇತಿಯ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದರು.

ವೈದೇಹಿ ಸಂಸ್ಥೆಯಲ್ಲಿ ಸಿದ್ಧವಾಗಿರುವ ವೈದೇಹಿ ಅಡ್ವಾನ್ಸ್ಡ ಸಿಮ್ಯೂಲೇಷನ್ ಅಕಾಡೆಮಿ ಏಷ್ಯಾದಲ್ಲಿಯೇ ಪ್ರಥಮ ಸುಸಜ್ಜಿತವಾದ ಕೇಂದ್ರವಾಗಿದೆ. ಹೆಚ್ಚು ವೃತ್ತಿಪರತೆಯಿಂದ ಕೂಡಿದೆ. ಈ ಬಗ್ಗೆ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚಿಸಿ, ಇಲಾಖೆಯಲ್ಲಿ ಸುಧಾರಣೆ ತರಲಾಗುವುದು ಎಂದು ಹೇಳಿದರು.

ತುರ್ತು ಔಷಧದಲ್ಲಿ ತರಬೇತಿಯ ಜೊತೆಗೆ ಚರ್ಚೆ, ಸಂವಾದ, ಸಂಶೋಧನೆ ಮೂಲಕ ಹೆಚ್ಚು-ಹೆಚ್ಚು ತಿಳಿದುಕೊಳ್ಳಬೇಕು. ವೈದೇಹಿ ಆಸ್ಪತ್ರೆಯಲ್ಲಿರುವ ತುರ್ತು ಔಷಧ ವಿಭಾಗದ ಪ್ರಯೋಗಲಯ ಏಷ್ಯಾದಲ್ಲೇ ಮೊದಲು ಎಂದು ಭಾವಿಸಿದ್ದೇನೆ. ವೈದ್ಯಕೀಯ ಕ್ಷೇತ್ರದಲ್ಲಿ ಮತ್ತಷ್ಟು ಗಣನೀಯ ಸಾಧನೆಗಳು ಆಗಬೇಕಿದೆ ಎಂದು ಹೇಳಿದರು.

ವೈದೇಹಿ ಸಮೂಹ ಸಂಸ್ಥೆಗಳ ಅಧ್ಯಕ್ಷೆಯಾದ ಶ್ರೀಮತಿ ಕಲ್ಪಜ ಡಿ.ಎ ರವರು ಮಾತನಾಡಿ, ತುರ್ತು ಔಷಧ ವಿಭಾಗದ ಕುರಿತು ನಾಗರಿಕರಲ್ಲಿ ಜಾಗೃತಿ ಮೂಡಿಸುವ ಕೆಲಸ ಆಗಬೇಕು. ಕೋವಿಡ್ ಸಂದರ್ಭದಲ್ಲಿ ಎಮರ್ಜೆನ್ಸಿ ಮೆಡಿಸಿನ್ ಬಗ್ಗೆ ಸಾಕಷ್ಟು ಅರ್ಥವಾಗಿದೆ. ಎಮರ್ಜೆನ್ಸಿ ಮೆಡಿಸಿನ್ ನ ಪ್ರಾಮುಖ್ಯತೆಯನ್ನು ಅರಿತು ಎಲ್ಲಾ ಆಸ್ಪತ್ರೆಗಳನ್ನು ಅದನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ವಿಮ್ಸ್ ಮತ್ತು ಆರ್‌ಸಿ ಸಲಹೆಗಾರರಾದ ಡಾ.ಮಹೇಶ್ ಕೊತ್ತಪಲ್ಲಿ ಮಾತನಾಡಿ, ಇತ್ತೀಚೆಗೆ ತುರ್ತು ಔಷಧ ವಿಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು ಚಿಕಿತ್ಸೆಗೆ ಒಳಪಡುತ್ತಿದ್ದಾರೆ. ಪ್ರತಿ ನಗರದಲ್ಲಿ 3 ಲೆವೆಲ್ ಟ್ರಾಮಾ ಕೇಂದ್ರಗಳಿರಬೇಕು. ಎಮರ್ಜೆನ್ಸಿ ರೋಗಿಯನ್ನು ಸಾಮಾನ್ಯ ನರ್ಸಿಂಗ್ ಹೋಮ್ನಲ್ಲಿ ಚಿಕಿತ್ಸೆ ಒಳಪಡಿಸಿದಾಗ, ಸೂಕ್ತ ಚಿಕಿತ್ಸೆ ದೊರೆಯದೆ ಆತನ ಸ್ಥಿತಿ ಮತ್ತಷ್ಟು ಹಾಳಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ತುರ್ತು ಔಷಧ ವಿಭಾಗದ ಕಲಿಕೆ ಹೆಚ್ಚಿನ ಸಂಖ್ಯೆಯಲ್ಲಿ ಆಗಬೇಕಿದೆ ಎಂದು ಹೇಳಿದರು.

ಇಎಮ್- ಕರ್ನಾಟಕ ರಾಜ್ಯಾದ್ಯಂತದ ತುರ್ತು ಚಿಕಿತ್ಸಕರನ್ನು ಒಳಗೊಂಡಿರುವ ಒಂದು ಅಂಗವಾಗಿದೆ. ತುರ್ತು ಔಷಧ ಒಂದು ವಿಶೇಷತೆಯಾಗಿ ಪ್ರವರ್ಧಮಾನಕ್ಕೆ ಬರುತ್ತಿದೆ. ಜೊತೆಗೆ ಪ್ರತಿ ವರ್ಷ ಇಎಂ-ಕರ್ನಾಟಕ ರಾಜ್ಯದಾದ್ಯಂತ ವಿಸ್ತರಿಸುತ್ತಿರುವುದು ಸಂತಸದ ವಿಷಯ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಆರ್.ಜಿ.ಯು.ಹೆಚ್.ಎಸ್ ನ ಮಾಜಿ ಮೊದಲ ಉಪಕುಲಪತಿಯಾದ ಡಾ. ಕಾಂತ ಎಸ್, ವೈದ್ಯಕೀಯ ತಜ್ಞರು, ವೈದ್ಯಕೀಯ ಸಿಬ್ಬಂದಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

This initiative underscores Karnataka's commitment to providing top-tier emergency medical services, with Vydehi Institute leading the charge.

Disclaimer: This news article is for informational purposes only and does not constitute medical advice. For medical concerns, consult a healthcare professional.

## ವಿದ್ಯಾರ್ಥಿಗಳಿಗೆ ಶ್ರದ್ಧಾಸಕ್ತಿ ಮುಖ್ಯ: ಸಚಿವ

**ಬೆಂಗಳೂರು:** ತುರ್ತು ಔಷಧ ವಿಭಾಗದ ಮಹತ್ವ ಏನೆಂಬುದು ಕೋವಿಡ್ ಸಂದರ್ಭದಲ್ಲಿ ಅರ್ಥವಾಗಿದ್ದು, ವೈದ್ಯಕೀಯ ವಿದ್ಯಾರ್ಥಿಗಳು ಹೆಚ್ಚಿನ ಆಸಕ್ತಿ ವಹಿಸಿ ತರಬೇತಿ ಪಡೆಯಬೇಕು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ವೈದೇಹಿ ವೈದ್ಯಕೀಯ ಮತ್ತು ಸಂಶೋಧನಾ ಕೇಂದ್ರದಲ್ಲಿ ಶನಿವಾರ ನಡೆದ 3ನೇ ವಾರ್ಷಿಕ ರಾಜ್ಯಮಟ್ಟದ ತುರ್ತು ಔಷಧ ಸಮ್ಮೇಳನ ಉದ್ಘಾಟಿಸಿದ ಅವರು, ತುರ್ತು ಔಷಧ ವಿಭಾಗ ವೈದ್ಯಕೀಯ ಕ್ಷೇತ್ರದಲ್ಲಿಯೇ ಅತ್ಯಂತ ಮುಖ್ಯವಾದದು. ಸಾವು ಮತ್ತು ಬದುಕಿನ ಮಧ್ಯೆ ಹೋರಾಟ ನಡೆಸುತ್ತಿರುವ ರೋಗಿಗೆ ಮರುಜೀವ ನೀಡಬಹುದಾಗಿದೆ. ಈ ಪರಿಸ್ಥಿತಿ ಕೋವಿಡ್ ಸಂದರ್ಭದಲ್ಲಿ ಅನುಭವಕ್ಕೆ ಬಂದಿದೆ ಎಂದರು.

ವೈದೇಹಿ ಸಂಸ್ಥೆಯಲ್ಲಿ ಸಿದ್ಧವಾಗಿರುವ ವೈದೇಹಿ ಅಡ್ವಾನ್ಸ್ಡ್ ಸಿಮ್ಯೂಲೇಷನ್ ಅಕಾಡೆಮಿ ಏಷ್ಯಾದಲ್ಲಿಯೇ ಪ್ರಥಮ ಸುಸಜ್ಜಿತವಾದ ಕೇಂದ್ರವಾಗಿದೆ. ಹೆಚ್ಚು




ವೃತ್ತಿಪರತೆಯಿಂದ ಕೂಡಿದೆ. ಈ ಬಗ್ಗೆ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚಿಸಿ, ಇಲಾಖೆಯಲ್ಲಿ ಸುಧಾರಣೆ ತರಲಾಗುವುದು ಎಂದು ತಿಳಿಸಿದರು.

ವೈದೇಹಿ ಸಮೂಹ ಸಂಸ್ಥೆಗಳ ಅಧ್ಯಕ್ಷೆ ಕಲ್ಪಜ ಡಿ.ಎ. ಮಾತನಾಡಿ, ತುರ್ತು ಔಷಧ ವಿಭಾಗದ ಕುರಿತು ನಾಗರಿಕರಲ್ಲಿ ಜಾಗೃತಿ ಮೂಡಿಸುವ ಕೆಲಸ ಆಗಬೇಕು. ಎಮರ್ಜೆನ್ಸಿ ಮೆಡಿಸಿನ್‌ನ ಪ್ರಾಮುಖ್ಯತೆಯನ್ನು ಎಲ್ಲಾ ಆಸ್ಪತ್ರೆಗಳು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ವಿಮ್ಸ್ ಮತ್ತು ಆರ್‌ಸಿ ಸಲಹೆಗಾರ ಡಾ. ಮಹೇಶ್ ಕೊತ್ತಪಲ್ಲಿ ಮಾತನಾಡಿ, ಇಎಂ-ಕರ್ನಾಟಕ ರಾಜ್ಯಾದ್ಯಂತ ತುರ್ತು ಚಿಕಿತ್ಸಕರನ್ನು ಒಳಗೊಂಡಿರುವ ಒಂದು ಅಂಗವಾಗಿದೆ. ತುರ್ತು ಔಷಧ ಒಂದು ವಿಶೇಷತೆಯಾಗಿ ಪ್ರವರ್ಧಮಾನಕ್ಕೆ ಬರುತ್ತಿದೆ. ಜೊತೆಗೆ ಪ್ರತಿ ವರ್ಷ ಇಎಂ-ಕರ್ನಾಟಕ ರಾಜ್ಯದಾದ್ಯಂತ ವಿಸ್ತರಿಸುತ್ತಿರುವುದು ಸಂತಸದ ವಿಷಯ ಎಂದರು.

ಕಾರ್ಯಕ್ರಮದಲ್ಲಿ ಆರ್‌ಜಿಯುಎಚ್‌ಎಸ್‌ನ ಮಾಜಿ ಮೊದಲ ಉಪಕುಲಪತಿ ಡಾ. ಕಾಂತ ಎಸ್., ವೈದ್ಯಕೀಯ ತಜ್ಞರು ಮುಂತಾದವರಿದ್ದರು.

*Note: The images of the news articles attached in the PDF explain the highlights of the event: 3rd Annual State Level Emergency Medicine Conference 2023*